**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 89/2020**

**ಚಾ.ಸಾಃ1, ಫ್ರಾ.ಸಾಃ1**

| | |
|---|---|
| ಸಾಕ್ಷಿದಾರನ ಹೆಸರು | ಸಾಂತೋಲಿನ್ ರೊಡ್ರಿಗೀಸ್ |
| ತಂದೆಯ ಹೆಸರು | ಇಸೆಂತಾ ರೊಡ್ರಿಗೀಸ್ |
| ವಯಸ್ಸು | 38 ವರ್ಷಗಳು |
| ಉದ್ಯೋಗ | ಆಟೋಚಾಲಕ |
| ವಾಸ್ತವ್ಯ | ಚಂದಾವರ |

**ಸಾಕ್ಷಿಯನ್ನು ದಿನಾಂಕಃ 04-08-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 31-12-2019 ರಂದು ನಾನು ಚಂದಾವರದ ಮನೆಯಿಂದ ರಾತ್ರಿ 09-30 ರ ಸಮಯಕ್ಕೆ ನಾನು ನನ್ನ ತಮ್ಮನಾದ ಚಾಸಾ-8 ಸಚಿನ್ ರೊಡ್ರಿಗೀಸ್ ಮತ್ತು ತಾಯಿಯಾದ ಚಾಸಾ-9 ಜಾಕಿನ್ ರೊಡ್ರಿಗೀಸ್‌ರವರ ಜೊತೆಯಲ್ಲಿ ಚಂದಾವರದಲ್ಲಿರುವ ಚರ್ಚಿಗೆ ಹೋಗಿದ್ದೆವು. ಹೋಗುವ ಮೊದಲು ನಮ್ಮ ಮನೆಯ ಮುಂದಿನ ಬಾಗಿಲಿನ ಒಳಗಿನ ಚಿಲಕವನ್ನು ಹಾಕಿ ಹಿಂದಿನ ಬಾಗಿಲಿಗೆ ಹೊರಗಿನಿಂದ ಬೀಗ ಹಾಕಿ ಹೋಗಿದ್ದೆವು. ಚರ್ಚಿನಲ್ಲಿ ಪ್ರಾರ್ಥನೆಯನ್ನು ಮುಗಿಸಿಕೊಂಡು ನಾವು ರಾತ್ರಿ 12-30 ರ ಸಮಯಕ್ಕೆ ನಾವು ವಾಪಸ್ಸು ಮನೆಗೆ ಬಂದಿರುತ್ತೇವೆ. ನಾನು ಮನೆಯ ಹಿಂದೆ ಹೋಗಿ ನೋಡಲಾಗಿ ಹಿಂದಿನ ಬಾಗಿಲಿಗೆ ಹಾಕಿದ್ದ ಬೀಗವನ್ನು ಒಡೆಯಲಾಗಿತ್ತು. ಮನೆಯ ಒಳಗೆ ಹೋಗಿ ಚಕ್ ಮಾಡಲಾಗಿ ಮನೆಯ ಹಾಲಿನಲ್ಲಿ ಇದ್ದ ಬಾಗಿಲಿಗೆ ಹಾಕಿದ್ದ ಬೀಗವನ್ನು ಸಹ ಒಡೆಯಲಾಗಿತ್ತು. ನಮ್ಮ ಮನೆಯಲ್ಲಿದ್ದ ಎರಡು ರೂಮುಗಳಿಗೆ ಹೋಗಿ ನೋಡಲಾಗಿ ನಮ್ಮ ತಾಯಿಯ ರೂಮಿನಲ್ಲಿದ್ದ ಕಪಾಟನ್ನು ಸಹ ಒಡೆಯಲಾಗಿತ್ತು. ಸದರಿ ಕಪಾಟಿನಲ್ಲಿ 3 ಬಂಗಾರದ ಚೈನುಗಳು, 2 ಬಂಗಾರದ ಬಳೆಗಳು, 4 ಬಂಗಾರದ ಉಂಗುರಗಳು ಮತ್ತು ರೂ.60,000-00 ನಗದನ್ನು ಒಂದು ಕವರಿನಲ್ಲಿ ಹಾಕಿ ಇಡಲಾಗಿತ್ತು. ನಾನು ಹೋಗಿ ನೋಡಿದಾಗ ಅವುಗಳು ಅಲ್ಲಿ ಇರಲಿಲ್ಲ. ನಾವು ಪ್ರಾರ್ಥನೆಗೆ ಹೋಗುವ ಮೊದಲು ಅವುಗಳು ಕಾಪಾಟಿನಲ್ಲಿ ಇದ್ದವು. ಅವುಗಳನ್ನು ಯಾರೋ ಕಳ್ಳತನ ಮಾಡಿದ್ದರಿಂದ ಮೊದಲು ನಮ್ಮ ಮನೆಯ ಕೆಳಗೆ ಇರುವ ಅಜ್ಜಿಯ ಮನೆಯವರಿಗೆ ವಿಷಯ ತಿಳಿಸಿರುತ್ತೇನೆ. ಘಟನೆಯ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಪಿರ್ಯಾದನ್ನು ನೀಡಿದ್ದು ಅವರು ಬರೆದುಕೊಂಡಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-1 ಮತ್ತು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮರುದಿನ ಪೋಲಿಸರು ಪಂಚನಾಮೆಗೆ ನಮ್ಮ ಮನೆಗೆ ಬಂದಿದ್ದರು. ಆ ಸಂದರ್ಭದಲ್ಲಿ ನಾನು, ಚಾಸಾ-8 ಮತ್ತು 9 ಇದ್ದರು. ಪೋಲಿಸರು ನಮ್ಮ ಮನೆಯನ್ನ ಪರಿಶೀಲನೆ ಮಾಡಿದರು. ಪೋಲಿಸರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಪೋಲಿಸರು ಸ್ಥಳದಲ್ಲಿ ಫಿಂಗರ್ ಪ್ರಿಂಟ್ ತೆಗೆದುಕೊಂಡಿರುತ್ತಾರೆ.

ಪೋಲಿಸರು ಸ್ಥಳಕ್ಕೆ ಬಂದಾಗ ಯಾವುದೇ ಬರವಣಿಗೆ ಮಾಡಿರುವುದಿಲ್ಲ. ಪೋಲಿಸರಿಗೆ ನಾನು ಉಪಚಾರ ಮಾಡಿ ಕಳುಹಿಸಿರುತ್ತೇನೆ.

ಸಾಕ್ಷಿಗೆ ಈ ಪ್ರಕರಣದ ಸ್ಥಳ ಪಂಚನಾಮೆ ಹಾಗೂ ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅವುಗಳ ಮೇಲಿನ ಸಹಿಗಳನ್ನು ಗುರುತಿಸಿರುತ್ತಾರೆ. ಆದ್ದರಿಂದ ಅವುಗಳನ್ನು ನಿಪಿ-2 ಮತ್ತು 3 ಹಾಗೂ ಅವುಗಳ ಮೇಲಿನ ಸಾಕ್ಷಿ ಸಹಿಗಳನ್ನು ಕ್ರಮವಾಗಿ ನಿಪಿ-2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಪೋಲಿಸರು ಮತ್ತೊಮ್ಮೆ ಅಂದರೆ ನಮ್ಮ ಮನೆಯಲ್ಲಿ ಕಳ್ಳತನವಾದ ಒಂದು ವಾರದ ನಂತರ ಬಂದಾಗ ಮಾಡಿರುತ್ತೇನೆ.

ಸಾಕ್ಷಿಗೆ 2 ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ. ಅದೇ ರೀತಿ ಚಿಲಕ ಮುರಿದಿರುವ ಮತ್ತೊಂದು ಛಾಯಾಚಿತ್ರ ತೋರಿಸಲಾಗಿ ಅದನ್ನೂ ಸಹ ಸಾಕ್ಷಿ ಒಪ್ಪಿಕೊಂಡು ಅವುಗಳನ್ನು ಕಳ್ಳತನವಾದ ದಿನ ರಾತ್ರಿ ಪೋಲಿಸರು ಬಂದು ತೆಗೆಸಿದ್ದಾರೆ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ-4 ರಿಂದ 6 ಎಂದು ಗುರುತಿಸಲಾಯಿತು.

ನಮ್ಮ ಮನೆಯಲ್ಲಿ ಕಳ್ಳತನವಾದ ಒಂದುವಾರದ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿರುತ್ತಾರೆ.

ನಮ್ಮ ಮನೆಯಲ್ಲಿ ಕಳ್ಳತನವಾದ ಸುಮಾರು 3-4 ತಿಂಗಳ ನಂತರ ಠಾಣೆಗೆ ಕರೆಸಿದ್ದು ನಾನು ಅಲ್ಲಿಗೆ ಹೋದಾಗ ಚೈನುಗಳು, ಬಳೆ ಮತ್ತು ಉಂಗುರಗಳು ಹಾಗೂ ಪರ್ಸು ಠಾಣೆಯಲ್ಲಿ ಇದ್ದವು. ನಾನು ಸದರಿ ಆಭರಣಗಳನ್ನು ಗುರುತಿಸಿರುತ್ತೇನೆ. ಆ ಬಗ್ಗೆ ಆಭರಣಗಳನ್ನು ತೋರಿಸಿ ನನ್ನ ಹೇಳಿಕೆ ಪಡೆದಿರುತ್ತಾರೆ. ಸದರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ 4 ಬಂಗಾರದಂತಿರುವ ಉಂಗುರಗಳು, 3 ಬಂಗಾರದಂತಿರುವ ಚೈನುಗಳು ಮತ್ತು ಒಂದು ಬಂಗಾರದಂತಿರುವ ಬಳೆಯನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮುಮಾ-1 ರಿಂದ 8 ಎಂದು ಗುರುತಿಸಲಾಯಿತು.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 01-01-2020 ರಂದು ಪೋಲಿಸರು ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದಕ್ಕೆ ಸಂಬಂಧಿಸಿದಂತೆ ಪಂಚನಾಮೆಗೆ ಬಂದಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ಪಂಚರಾಗಿ ಚಾಸಾ-2 ಸಾವೇರ ಡಿಯೋಗ ನೊರೊನಾ ಮತ್ತು ಚಾಸಾ-3 ಜುಜೆ ಸಾಂತಾ ಪೆದ್ರು ಹಾಜರಿದ್ದರು ಎಂದರೆ ಸರಿ. ಕಳುವಾದ ಕೋಣೆಯನ್ನು ನಾನು ಪೋಲಿಸರಿಗೆ ಪಂಚರ ಸಮಕ್ಷಮ ತೋರಿಸಿದ್ದೇನೆ ಎಂದರೆ ಸರಿ. ಪಂಚರು ಪಂಚನಾಮೆಯನ್ನು ಜರುಗಿಸಲು ಪೋಲಿಸರಿಗೆ ಮಾಹಿತಿ ನೀಡಿದರು ಎಂದರೆ ಸರಿ. ಪಂಚರ ಮಾಹಿತಿಯ ಮೇರೆಗೆ ಪೋಲಿಸರು ನಿಪಿ-2 ರ ಪ್ರಕಾರ ಸ್ಥಳದಲ್ಲಿಯೇ ಪಂಚನಾಮೆಯನ್ನು ತಯಾರಿಸಿದರು ಮತ್ತು ನಿಪಿ-3 ರ ಪ್ರಕಾರ ಕಚ್ಚಾ ನಕಾಶೆ ತಯಾರಿಸಿದರು ಮತ್ತು ನಿಪಿ-4 ರಿಂದ 7 ರ

ಪ್ರಕಾರ ಛಾಯಾಚಿತ್ರಗಳನ್ನು ತೆಗೆಸಿದರು ಎಂದರೆ ಸರಿ. ಆ ಸಂದರ್ಭದಲ್ಲಿ ನಿಪಿ-2 ಮತ್ತು 3ರ ಮೇಲೆ ನಾನು ಮತ್ತು ಪಂಚರು ಸಹಿ ಮಾಡಿದ್ದೇವೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಹಿಂದಿನ ಬಾಗಿಲಿಗೆ ಹಾಕಿದ್ದ ಬೀಗ ಮುರಿದು ಕೆಳಗೆ ಬಿದ್ದಿತ್ತು. ಹಾಲಿನಲ್ಲಿದ್ದ ಬಾಗಿಲಿಗೆ ಹಾಕಿದ್ದ ಬೀಗ ಸಹ ಮುರಿದು ಕೆಳಗೆ ಬಿದ್ದಿತ್ತು. ಅವುಗಳನ್ನು ಪೋಲಿಸರು ತೆಗೆದುಕೊಂಡಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಪಿರ್ಯಾದಿನಲ್ಲಿ ಎರಡು ಬಳೆ ಕಳುವಾಗಿದೆ ಎಂದು ತೋರಿಸಿದ್ದೇನೆ ಎಂದರೆ ಸರಿ. ಪೋಲಿಸರು ನನಗೆ ಒಂದು ಬಳೆಯನ್ನು ಮಾತ್ರ ತೋರಿಸಿರುತ್ತಾರೆ.

ಬಂಗಾರದ ಆಭರಣಗಳನ್ನು ನನ್ನ ತಂದೆ ಹಾಗೂ ತಾಯಿ ಮಾಡಿಸಿದ್ದರು. ಎಲ್ಲಿ ಮಾಡಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಬಂಗಾರದ ಆಭರಣಗಳನ್ನು ನಾನು ಮಾಡಿಸಿದ್ದೇನೆ ಎಂದು ಪೋಲಿಸರಿಗೆ ಯಾವುದೇ ರಸೀದಿಗಳನ್ನು ನೀಡಿರುವುದಿಲ್ಲ. ಸದರಿ ಆಭರಣಗಳನ್ನು ನನ್ನ ತಂದೆ ಮತ್ತು ತಾಯಿ ಬಹಳ ಹಿಂದೆ ಮಾಡಿಸಿದ್ದು ಅವುಗಳನ್ನು ಎಲ್ಲಿ ಮಾಡಿಸಿದ್ದಾರೆ ಎನ್ನುವುದು ಗೊತ್ತಿಲ್ಲ. ಕಳುವಾದ ಬಗ್ಗೆ ಪೋಲಿಸರಿಗೆ ಮಾಹಿತಿಯನ್ನು ಅದೇ ದಿನ ರಾತ್ರಿ ತಿಳಿಸಿದ್ದು ಪೋಲಿಸರು ರಾತ್ರಿ 12-30ಕ್ಕೆ ಬಂದಿದ್ದರು. ಒಡೆದಿದ್ದ ಬೀಗದ ಛಾಯಾಚಿತ್ರವನ್ನು ಪೋಲಿಸರು ತೆಗೆಸಿದ್ದರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ.

ನಿಪಿ-2 ಮತ್ತು 3ರ ಮೇಲಿನ ಸಹಿಗಳನ್ನು ಕಳ್ಳತನವಾದ ಮರುದಿನ ಚಂದಾವರದಲ್ಲಿ ಮಾಡಿರುತ್ತೇನೆ.

ಚಂದಾವರ ಗ್ರಾಮ ಬೇರೆ ಮತ್ತು ಹೊದಕೆಶಿರೂರು ಗ್ರಾಮ ಬೇರೆ ಎಂದರೆ ಸರಿ. ನಿಪಿ-3ನ್ನು ಎಲ್ಲಿ ತಯಾರಿಸಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ.

ಮುಮಾ-1 ರಿಂದ 8 ನಾನು ಠಾಣೆಗೆ ಹೋದಾಗ ಚಾಸಾ-24 ವಸಂತ ಆಚಾರ್ ರವರ ಬಳಿ ಇತ್ತು. ಮುಮಾ-1 ರಿಂದ 8 ನಮ್ಮ ಮನೆಯಿಂದ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ಮುಮಾ-1 ರಿಂದ 8ನ್ನು ನಾವು ಮಾಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಯಾವುದೇ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನಮ್ಮ ಮನೆಗೆ ಭೇಟಿ ನೀಡಿಲ್ಲ, ಪಂಚನಾಮೆ ಜರುಗಿಸಿಲ್ಲ ಮತ್ತು ಕಚ್ಚಾ ನಕಾಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಮುಮಾ-1 ರಿಂದ 8 ಆರೋಪಿಗಳ ಸಹೋದರಿಯಾದ ನೀಹಾರವರಿಗೆ ಸೇರಿದ್ದ ಆಭರಣಗಳು ಎಂದರೆ ಸರಿಯಲ್ಲ. ಆಕೆಯು ಸದರಿ ಆಭರಣಗಳನ್ನು ಮಣಪುರಂ ಫೈನಾನ್ಸನಲ್ಲಿ ಅಡವು ಇಟ್ಟಿದ್ದಳು ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**